***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ***
***ಸಿಸಿ.ನಂ. 709/2022***

ಸಾಕ್ಷಿಯ ಹೆಸರುಃ ತಿಪ್ಪೇಶ್ ಜಿ. ಚಾಸಾಃ 12

ತಂದೆಯ ಹೆಸರುಃ ಗುರುಸಿದ್ದಪ್ಪ ಪ್ರಾಸಾಃ 3

ವಯಸ್ಸುಃ 41 ವರ್ಷ

ಉದ್ಯೋಗಃ ಮುಖ್ಯ ಪೇದೆ, ಕೊಪ್ಪ ವೃತ್ತ ಕಚೇರಿ

ವಾಸಃ ಕೊಪ್ಪ

ದಿನಾಂಕಃ20/12/2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ ಮಾನ್ಯ ಪ್ರಭಾರ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ವಿಸಿ ಮೂಲಕಃಃ**

ನಾನು ಹರಿಹರಪುರ ಪೋಲೀಸ್ ಠಾಣೆಯಲ್ಲಿ ದಿನಾಂಕಃ27/09/2021 ರಿಂದ 03/08/2022 ರವರೆಗೂ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ22/05/2022 ರಂದು ನಾನು ಹಗಲು ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿದ್ದಾಗ ಸಂಜೆ 7-15 ಗಂಟೆ ಸಮಯದಲ್ಲಿ ಚಾಸಾ 1 ರವರು ಪೋಲಿಸ್ ಠಾಣೆಗೆ ಹಾಜರಾಗಿ ಆರೋಪಿ, ವರದಿಯನ್ನು, ಅಮಾನತುಪಡಿಸಿಕೊಂಡಿರುವ ವಸ್ತುಗಳನ್ನು ಹಾಗೂ ಮಹಜರನ್ನು ನನ್ನ ಮುಂದೆ ಹಾಜರಪಡಿಸಿದ್ದು ಅವುಗಳನ್ನು ಸ್ವೀಕರಿಸಿಕೊಂಡು ಠಾಣಾ ಮೊ. ಸಂಖ್ಯೆ 23/2022 ರಲ್ಲಿ ದಾಖಲಿಸಿ ಪ್ರ.ವ.ವರದಿಯನ್ನು ನನ್ನ ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡಿರುವ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 23/2022 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯದಿಂದ ಅನಮತಿ ಪಡೆದಿರುತ್ತೇನೆ. ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 1 ರವರಿಗೆ ನೀಡಿರುತ್ತೇನೆ. ಮಹಜರ್ ಕಾಲದಲ್ಲಿ ಇಲಾಖಾ ಕ್ಯಾಮೇರಾದಿಂದ ತೆಗೆದುಕೊಂಡಿರುವ ಭಾವಚಿತ್ರವನ್ನು ಡಾಟಾ ಕೇಬಲ್ ಮೂಲಕ

ಇಲಾಖೆಯ ಕಂಪ್ಯೂಟರ್ ಗೆ ವರ್ಗಾಯಿಸಿ ಸಿಡಿಗೇ ರೈಟ್ ಮಾಡಿ ಈ ಬಗ್ಗೆ ದೃಡೀಕರಣ ಪರ್ತವನ್ನು ಕಲಂ 65 ಬಿ ಎವಿಡೆನ್ಸ್ ಅಕ್ಟ ನ ಅಡಿಯಲ್ಲಿ ನೀಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ವರದಿಯಾಗಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

ಪ್ರ.ವ.ವರದಿಯನ್ನು ನಿಪಿ.8 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

ದೃಢೀಕರಣ ಪತ್ರವನ್ನು ನಿಪಿ.9 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಪಿಟಿಡಿ ., ವಕೀಲರಿಂದಃ</u>**

ದಿನಾಂಕಃ22/05/2022 ರಂದು ಚಾಸಾ 1 ರವರು ಆರೋಪಿ, ವರದಿ ಮು. ಮಾಲುಗಳನ್ನು ಹಾಗು ಮಹರಜನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಭಾವಚಿತ್ರಗಳನ್ನು ಇಲಾಖಾ ಕ್ಯಾಮೇರಾದಿಂದ ಇಲಾಖಾ ಕಂಪ್ಯೂಟರ್ ಗೆ ವರ್ಗಾಯಿಸಿ ನಂತರ ಸಿಡಿಗೆ ರೈಟ್ ಮಾಡಲು ನನಗೆ ಯಾವುದೇ ವಿಶೇಷ ತರಬೇತಿ ಇಲಾಖಾ ವತಿಯಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಚಾಸಾ 1 ರವರು ನನ್ನ ಮೇಲಾಧಿಕಾರಿಗಳಾಗಿದ್ದರಿಂದ ಅವರ ಸುಳ್ಳು ವರದಿಯನ್ನು ಆಧರಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರ.ವ.ವರದಿಯನ್ನು ದಾಖಲಿಸಿಕೊಂಡು ನಿಪಿ.9 ರಂತೆ ಸುಳ್ಳು ದೃಡೀಕರಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಮೇಲಾಧಿಕಾರಿಗಳಾಗಿದ್ದರಿಂದ ಅವರ ಚಿತಾವಣೆಯ ಮೇರೆಗೆ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ ನುಡಿಯುತ್ತಿದ್ದಃನೆ ಎಂರೆ ಸರಿಯಲ್ಲ. ಮು. ಮಾಲುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ದಿನಾಂಕಃ20/12/2024 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ